ಕವನ ಚಿತ್ರಪಟ

೪

ಲೇಖಕರು
ಟಿ.ಎಸ್. ನಾಗರಾಜ ಶೆಟ್ಟಿ, ತಿಪಟೂರು
ಮೊ: ೯೪೪೮೯೭೯೫೩೭

ಚಿತ್ರಗಳು
ಮಲ್ಲಪ್ಪ ಅ. ನಾಟಿಕಾರ, ವಿಜಯಪುರ


**ಶಿಕ್ಷಕರಲ್ಲಿ ನಿವೇದನೆ:**
ಈ ವಿಶಿಷ್ಟ ಚಿತ್ರಪಟವನ್ನು ಮಕ್ಕಳಿಗೆ ತೋರಿಸುತ್ತಾ ಕವನವನ್ನು ಒಮ್ಮೆ ಓದಿ ಹೇಳಿ. ನಂತರ ಮಕ್ಕಳೇ ಸ್ವತಃ ವಾಚಿಸಲು ಮತ್ತು ರಾಗವಾಗಿ ಹಾಡಲು ಪ್ರೋತ್ಸಾಹಿಸಿ. ಅನಂತರ ಅವರದೇ ಆದ ರೀತಿಯಲ್ಲಿ ಸಂಭಾಷಣೆ ನಡೆಸಲು, ಕಿರು ರೂಪಕ ಮಾಡಲು ಪ್ರೇರೆಪಿಸಿ.


ಜನವರಿ ಫೆಬ್ರವರಿ ಮಾರ್ಚ್ ೨೦೨೫


ಆರಂಭ ಯೋಜನೆ
Arambha 2024-25 Project
is Supported by Many
Individual Donors

ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರ
Dhwani Educational Resource Centre


# ಹಾವಾಡಿಗ




ಡೊಂಬರ ಹುಡುಗಿ ಬಿದಿರಿನ ಮೇಲೆ
ಗೊಂಬೆಯ ಹಾಗೆ ಮುಂದಕೆ ನಡೆಯಲು
ಅಚ್ಚರಿಯಿಂದ ಅಗಲಿಸಿ ಕಣ್ಣನು
ಬಿಟ್ಟ ಬಾಯಲೇ ಹೊಗಳಿದರು



ಅಂಗಿಯ ಕಳಚಿ ರಿಂಗನು ಹಿಡಿದು
ನುಸುಳಿದ ಹುಡುಗನು ಅದರೊಳಗೆ
ಮಯ್ಯನು ಸುತ್ತಿ ಕಯ್ಯನು ಚಾಚಿ
ಜಾರಿದನವನು ಹೊರಗಡೆಗೆ!


ಪುಂಗಿಯನೂದುತ ಬಂದನು ತಾತ
ಹಾವಿನ ಬುಟ್ಟಿ ನೆಲದಲ್ಲಿ
ಉದ್ದನೆ ಬಾಲದ ಮುಂಗುಸಿಯೊಂದನು
ಬಿಗಿದನು ಅಲ್ಲೇ ಹಗ್ಗದಲಿ!


ನೋಡಿರಿ ಈಗಲೆ ತುಸು ಹೊತ್ತಲ್ಲೇ
ಹಾವ್ರೊ ಮುಂಗುಸಿ ಜಗಳವನು
ತೋರುವೆ ನಿಮಗೆ ಚಪ್ಪಳೆ ತಟ್ಟಿರಿ
ಎಸೆಯಿರಿ ಅವಕೆ ಬಿಡಿಗಾಸನ್ನು


ಹಾವಿಗೆ ಕೊಡುವೆನು ಹಾಲು ಮೊಟ್ಟೆ
ಮುಂಗುಸಿಗೂ ಆಹಾರ
ಎಲ್ಲರ ಹೊಟ್ಟೆ ತುಂಬಿದ ಮೇಲೆ
ಮಗಳಿಗೆ ಕೊಡಿಸುವೆ ಮುತ್ತಿನ ಹಾರ


ಥಟ್ಟನೆ ತೆರೆದನು ಹಾವಿನ ಬುಟ್ಟಿ
ಬುಸ್ಸನೆ ಎತ್ತಿತು ಹೆಡೆಯನ್ನು
ಪಟಪಟ ಚಪ್ಪಾಳೆ ತಟ್ಟಿದರೆಲ್ಲರು
ಕಣ್ಣಲೆ ಸವಿದರು ಸೊಗಸನ್ನು




'ಧ್ವನಿ' ಶೈಕ್ಷಣಿಕ ಯೋಜನೆಗಳ
ವ್ಯಾಪ್ತಿಯಲ್ಲಿ ಉಚಿತ ಹಂಚಿಕೆಗಾಗಿ

ಸಂಪರ್ಕ ಮಾಹಿತಿ
ಧ್ವನಿ
ಶೈಕ್ಷಣಿಕ ಸಂಪನ್ಮೂಲ ಕೇಂದ್ರ
# ೭೬,'ಪುಷ್ಪಾಂಜಲಿ' ೩ನೇ ಅಡ್ಡರಸ್ತೆ
ಶಿವಗಿರಿ, ಧಾರವಾಡ–೫೮೦೦೦೭
ಮೊ. ೯೫೮ ೬೬೬ ೧೦೫೫
dhwanitrust@gmail.com
www.dhwanitrust.org

ಗಮನಿಸಿ : ಈ ಶೈಕ್ಷಣಿಕ ಸಂಪನ್ಮೂಲವನ್ನು ಕೇವಲ ಶೈಕ್ಷಣಿಕ ಉದ್ದೇಶಕ್ಕಾಗಿ ರೂಪಿಸಲಾಗಿದೆ. ಇದನ್ನು ಧ್ವನಿ ಶೈಕ್ಷಣಿಕ ಸಂಪನ್ಮೂಲ ಕೇಂದ್ರದ ಪೂರ್ವಾನುಮತಿಯಿಲ್ಲದೇ ವಾಣಿಜ್ಯ ಉದ್ದೇಶಗಳಿಗಾಗಿ ಪುನರ್ಮುದ್ರಿಸುವುದಾಗಲೀ, ಬಳಸಿಕೊಳ್ಳುವುದಾಗಲೀ ನಿಷಿದ್ಧ. ಶೈಕ್ಷಣಿಕ ಉದ್ದೇಶದಿಂದ ಶಿಕ್ಷಕರು, ಪಾಲಕರು, ಸಂಪನ್ಮೂಲ ವ್ಯಕ್ತಿಗಳು ಇದನ್ನು ಉಪಯೋಗಿಸುವುದಾದರೆ ಧ್ವನಿ ಶೈ.ಸಂ.ಕೇಂದ್ರದ ಗಮನಕ್ಕೆ ತರವುದು ಅಪೇಕ್ಷಣೀಯ.